ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ವಾದಿ ಪರ ಶ್ರೀಮತಿ ಪಿ ವಿ ವಕೀಲರಿಂದಃ-

ನಾನು ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ದಿನಾಂಕಃ14.03.2002 ರಂದು ಆದ ನೋಂದಾಯಿತ ಕ್ರಯಪತ್ರದ ದೃಢೀಕೃತನಕಲನ್ನು ಹಾಜರು ಮಾಡಿದ್ದು ಅದನ್ನು ನಿಪಿ-1 ಎಂದು, ದಾವಾ ಆಸ್ತಿಗೆ ಸಂಬಂಧಪಟ್ಟಂತೆ 2000-2001 ರ ಅಸೆಸ್‌ಮೆಂಟ್ ಅನ್ನು ಹಾಜರು ಮಾಡಿದ್ದು ಅದನ್ನು ನಿಪಿ-2 ಎಂದು, 2006-07 ನೇ ಸಾಲಿನ ಘೋಶಿತ ಆಸ್ತಿ ತೆರಿಗೆಯನ್ನು ಹಾಜರು ಮಾಡಿದ್ದು ಅದನ್ನು ನಿಪಿ-3 ಎಂದು, ಆಸ್ತಿ ತೆರಿಗೆ ರಿಜಿಸ್ಟರ್ ಅನ್ನು ಹಾಜರು ಮಾಡಿದ್ದು ಅದನ್ನು ನಿಪಿ-4 ಎಂದು, ಆಸ್ತಿ ತೆರಿಗೆ ವಿವರ ಪಟ್ಟಿಯನ್ನು ಹಾಜರು ಮಾಡಿದ್ದು ಅದನ್ನು ನಿಪಿ-5 ಎಂದು, ದಾವಾ ಆಸ್ತಿಗೆ ಸಂಬಂಧಪಟ್ಟ ಇ ಸಿ ಯನ್ನು ಹಾಜರು ಮಾಡಿದ್ದು ಅದನ್ನು ನಿಪಿ-6 ಎಂದು, 2002-03 ನೇ ಸಾಲಿನಿಂದ 2019-20 ನೇ ಸಾಲಿನ ವರೆಗಿನ ಆಸ್ತಿ ತೆರಿಗೆ ಪಾವತಿಯನ್ನು ಹಾಜರು ಮಾಡಿದ್ದು ಅವುಗಳನ್ನು ನಿಪಿ-7 ರಿಂದ ನಿಪಿ-13 ಎಂದು, ಫಾರಂ 2 ಅನ್ನು ಹಾಜರು ಮಾಡಿದ್ದು ಅದನ್ನು ನಿಪಿ-14 ಎಂದು, ತೆರಿಗೆ ಪಾವತಿ ರಶೀದಿಗಳನ್ನು ಹಾಜರು ಮಾಡಿದ್ದು ಅವುಗಳನ್ನು ನಿಪಿ-15 ರಿಂದ ನಿಪಿ-26 ಎಂದು, ದಿನಾಂಕಃ 01.04.2013 ರಂದು ಆದ ನೋಂದಾಯಿತ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ಅದನ್ನು ನಿಪಿ-27 ಎಂದು, ಮತ್ತೊಂದು ಕಂದಾಯ ಪಾವತಿ ರಶೀದಿಯನ್ನು ಹಾಜರು ಮಾಡಿದ್ದು

ಅದನ್ನು ನಿಪಿ-28 ಎಂದು, ದಿನಾಂಕಃ23.012.2003 ರಿಂದ 11.06.2018 ರ ವರೆಗಿನ ಇಸಿ ಯನ್ನು ಹಾಜರು ಮಾಡಿದ್ದು ಅದನ್ನು ನಿಪಿ-29 ಎಂದು, ದಿನಾಂಕಃ07.02.2020 ರಂದು ನಗರಸಭೆ ಕರ್ಯಾಲಯ ರಾಮನಗರದವರು ನೀಡಿದ ಹಿಂಬರಹವನ್ನು ನಿಪಿ-30 ಎಂದು, ಒಂದು ಹಣ ಪಾವತಿ ರಶೀದಿಯನ್ನು ಹಾಜರು ಮಾಡಿದ್ದು ಅದನ್ನು ನಿಪಿ-31 ಎಂದು, ದಿನಾಂಕಃ10.02.2020 ರಂದು ಪೌರಾಯುಕ್ತರು ರಾಮನಗರ ಇವರಿಗೆ ನೀಡಿದ ಆರ್‌ಟಿಐ ಅರ್ಜಿಯನ್ನು ಹಾಜರು ಮಾಡಿದ್ದು ಅದನ್ನು ನಿಪಿ-32 ಎಂದು, ದಿನಾಂಕಃ17.12.2019 ರಂದು ನಗರಸಭೆಯ ಆಯುಕ್ತರು ರಾಮನಗರ ಇವರಿಗೆ ನೀಡಿದ ಅರ್ಜಿಯನ್ನು ಹಾಜರು ಮಾಡಿದ್ದು ಅದನ್ನು ನಿಪಿ-33 ಎಂದು, ದಿನಾಂಕಃ31.01.2020 ರಂದು ಪೌರಾಯುಕ್ತರು ರಾಮನಗರ ಇವರಿಗೆ ದೃಢೀಕೃತ ಹಕ್ಕು ಪತ್ರವನ್ನು ನೀಡುವಂತೆ ನೀಡಿದ ಅರ್ಜಿಯನ್ನು ಹಾಜರು ಮಾಡಿದ್ದು ಅದನ್ನು ನಿಪಿ-34 ಎಂದು, ದಿನಾಂಕಃ01.04.2001 ರಿಂದ 31.03.2004 ರ ವರೆಗಿನ ಇ ಸಿ ಯನ್ನು ಹಾಜರು ಮಾಡಿದ್ದು ಅದನ್ನು ನಿಪಿ-35 ಎಂದು, ವರ್ಷಾವಾರು ದೃಡೀಕರಣ ಪತ್ರವನ್ನು ಹಾಜರು ಮಾಡಿದ್ದು ಅದನ್ನು ನಿಪಿ-36 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿ ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದು ನ್ಯಾಯದ ಹಿತ ದೃಷ್ಟಿಯಿಂದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.